
ಮೇಲೂ ಇಲ್ಲ. ಆ ಮುಂದೆ ಬಂದ ಕವಿಗಳು, ಓದುಗ ಪಂಡಿತರು ಇವನ ಮುಡಿಗೆ (ಮುಡಿಗೆಯ ಅಷ್ಟಕ) ಪವಾಡಗಳ ಟೋಪಿಯನ್ನು ಏರಿಸಿದ್ದಾರೆ. ಇವನ ಮೇಲಿನ ಇತರ ಕವಿಗಳ ಹೊಗಳಿಕೆಯ ಪ್ರಮಾಣವೂ ಅಷ್ಟೆ. ಒಬ್ಬ ನಿಜದ ನೇರ ಸಾಧಕ, ಮಹಾಭಕ್ತ, ಪ್ರತಿಭಾವಂತ ಪ್ರಸಿದ್ಧ ಕವಿಯ ಮೇಲೆ ಹಲವು ಬಗೆಯ ಕಥೆಗಳು ಹುಟ್ಟಿಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ರಾಘವಾಂಕನು ರಾಜನ ಮೇಲೊಂದು ಕಾವ್ಯವನ್ನು ಬರೆದು ತಂದು ಈ ಸೋದರಮಾವ ಗುರುವಿನ ಮುಂದೆ ಇರಿಸಿ ಮಾತು ಆರಂಭಿಸುವಲ್ಲೇ ಶಿಷ್ಯನ ಕಪಾಲಕ್ಕೆ ಹೊಡೆದು ಐದು ಹಲ್ಲು ಉದುರಿಸಿದ 'ದಂತ' ಕಥೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಓದಿದವರೆಲ್ಲ ಬಲ್ಲರು. ಅಷ್ಟರಮಟ್ಟಿಗೆ ಹರಿಹರ ಲೌಕಿಕ ಸಂಪತ್ತಿನ ಒಡೆಯರಾದ ಆಳರಸರ ದ್ವೇಷಿ. ಆದರೆ, ಶಿಷ್ಯ ರಾಘವಾಂಕ ದಂತ ಉದುರಿಸಿಕೊಳ್ಳುವ ದೋಷವನ್ನೇನೂ ಎಸಗಿರಲಿಲ್ಲ. ಸತ್ಯ ನಿರ್ವಹಣೆಗೆ ಬದುಕಿನ ಪರ್ಯಂತರ ಹೋರಾಟ ಮಾಡಿ ತನ್ನನ್ನೂ ಸೇರಿಸಿ, ಸತಿಪುತ್ರರನ್ನು ಮಾರಿಕೊಂಡು ಸ್ಮಶಾನ ಸೇರಿದವನ ಮುಂದೆ ಅಲ್ಲೇ ಪ್ರತ್ಯಕ್ಷನಾದ ಶಿವನ ಕಥೆ ಅದು. ಹೇಗೆ ಹರಿಹರ ಮಾದರ ಚೆನ್ನಯ್ಯನಿದ್ದ ಅಸ್ಪೃಶ್ಯರ ಕೇರಿಗೆ ಚೋಳನನ್ನು ಕರೆತರುತ್ತಾನೋ, ರಾಘವಾಂಕ ನಿರ್ವಹಿಸಿದ್ದೂ ಅದೇ ರೀತಿಯ ಕಾವ್ಯಕಥೆಯನ್ನು.



ಹರಿಹರ ತಾನು ನೋಡಲಾಗದ, ಯೋಚಿಸಲಾಗದ ಅರಸರನ್ನು ದೂರ ಇಟ್ಟು ಮಾತನಾಡುವಷ್ಟಕ್ಕೆ ಅವನ ಜೀವನ ಸಂಬಂಧಿ ಕಥೆಗಳಿವೆಯೇ ಅಂದರೆ ಸಂಸಾರ ಸಂಗತಿಯೂ ಅಷ್ಟೆ. ನಿಜ ಜೀವನದಲ್ಲಿ ಹರಿಹರ ಸಂಸಾರ ಹೊಂದಿದ್ದನೋ ಇಲ್ಲವೋ, ಅವನ ಕಾವ್ಯ ಪ್ರತಿಭೆಗೆ ಮರುಳಾಗಿ ತಮಿಳುನಾಡಿನ ತಿರುವಾಲೂರಿಂದ ಮಹಾದೇವಿ ಎಂಬೊಬ್ಬಳು ಮನದಲ್ಲಿಯೇ ಕಲ್ಪಿಸಿಕೊಂಡ ಅಸಾಧಾರಣ ಪ್ರತಿಭಾವಂತ. ಸುಂದರಾಂಗ ಕವಿಯನ್ನು ವಿವಾಹವಾಗಲು ಬಂದು, ಸನ್ಯಾಸ ದೀಕ್ಷೆಯನ್ನು ಪಡೆದು ವೈರಾಗ್ಯ ಪರಾಯಣೆಯಾದಳಂತೆ. ಆದರೆ, ಹರಿಹರನ ಶೃಂಗಾರ ಸಂಬಂಧಿ ವರ್ಣನೆಗಳನ್ನು ನೋಡಿದರೆ ಅವನ ಭಕ್ತಿಯನ್ನೇ ಅನುಮಾನ ಮಾಡುವಂತಿವೆ! ಇಷ್ಟಾದರೂ ಹರಿಹರ ತನ್ನನ್ನರಸಿ ಬಂದ ಪ್ರೇಮಿಯನ್ನು ವೈರಾಗ್ಯವನಿತೆಯನ್ನಾಗಿ ಪರಿವರ್ತಿಸಿದ್ದು ನಿಜವೇ ಇರಬೇಕು. ಯಾಕೆಂದರೆ, ಅವನ 'ಪಿಂಡೋತ್ಪತ್ತಿ ರಗಳೆ' ಅಥವಾ 'ಸಂಸಾರ ವ್ಯಾಮೋಹ ನಿರಸನ' ಕಥಾನಕವನ್ನು ಗಮನಿಸಿದರೆ ಪ್ರೇಮ, ಕಾಮ, ಶೃಂಗಾರ, ವೈರಾಗ್ಯವನ್ನು ಅದರ ಸಜೀವತೆಯಲ್ಲೇ ಹೇಳಬಲ್ಲವನೆನಿಸುತ್ತಾನೆ. ಮಕ್ಕಳು ತಾಯಿಯ ಎದೆಹಾಲು ಕುಡಿದು ಬೆಳೆಯುವಲ್ಲಿಂದಲೇ ಸಂಸಾರ ವಿರಕ್ತಿ ಹುಟ್ಟಿಸುವ ಹರಿಹರ ಸ್ತ್ರೀ ಪುರುಷ ಸಂಬಂಧವನ್ನು ಕುರಿತು–